ಮಾಡಲಾಗುತ್ತದೆ 300 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ಇಲಾಖೆಯಲ್ಲಿನ ಎಸ್ ಎಸ್ ಎಲ್ ಸಿ ಪಾಸ್ಸಾದ ಡಿ ದರ್ಜೆ ನೌಕರರಿಗೆ ತರಬೇತಿ ನೀಡಿ ಬಡ್ತಿ ಮುಖೇನ ತುಂಬಲು ಕ್ರಮವಹಿಸಿದ್ದು ಈಗಾಗಲೇ 244 ಡಿ ದರ್ಜೆ ನೌಕರರಿಗೆ ತರಬೇತಿ ನೀಡಲಾಗಿದೆ ಎಸ್ ಎಸ್ ಎಲ್ ಸಿ ಅಂಕಪಟ್ಟಿ ಪರೀಕ್ಷೆ ಮಂಡಳಿಯ ಪರಿಶೀಲನೆಗೆ ಕಳುಹಿಸಿದ್ದು ವರದಿ ಬಂದ ಕೂಡಲೇ ಭರ್ತಿ ಮಾಡಲು ಕ್ರಮ ಜರುಗಿಸಲಾಗುವುದು 300 ಡಿ ದರ್ಜೆ ನೌಕರರ ಹುದ್ದೆಗಳನ್ನು ಔಟ್ ಸೋರ್ಸ್ ಮುಖೇನ ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ

642 (876) ಶ್ರೀಮತಿ ಸುನಿತ ವೀರಪ್ಪಗೌಡ ಜೆ (ಬನ್ನೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ದಾದಿಯರ ಹುದ್ದೆಗಳೆಷ್ಟು?

ಆ) ಈ ಹುದ್ದೆಗಳಿಗೆ ನೇಮಕ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ದಾದಿಯರ ಸಂಖ್ಯೆ 536

ಆ) ದಾದಿಯರನ್ನು ನೇಮಕ ಮಾಡಲು ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿಗಳು ಪರಿಶೀಲನೆಯಲ್ಲಿದ್ದು, ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ನೇಮಕಾತಿ ಪ್ರಕ್ರಿಯೆ ಮುಗಿದ ಕೂಡಲೇ ಆದ್ಯತೆ ಮೇರೆಗೆ ಭರ್ತಿ ಮಾಡಲಾಗುವುದು

643 (877) ಶ್ರೀಮತಿ ಸುನಿತ ವೀರಪ್ಪಗೌಡ ಜೆ (ಬನ್ನೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಟ್ಟಡಗಳಿಲ್ಲದೆ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ಕೇಂದ್ರಗಳಿಗೆ ಕಟ್ಟಡ ನಿರ್ಮಿಸಲು ಅನುದಾನ ಬಿಡುಗಡೆ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲಿ, ಯಾವಾಗ ಅನುದಾನ ಬಿಡುಗಡೆ ಮಾಡಲಾಗುವುದು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 100 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸ್ವಂತ ಕಟ್ಟಡ ಇರುವುದಿಲ್ಲ ಪಟ್ಟಿ ಲಗತ್ತಿಸಿದೆ.

ಆ) ನಿವೇಶನ ಲಭ್ಯತೆಯ ಆಧಾರದ ಮೇಲೆ ಆರ್ ಐ ಡಿ ಎಫ್, ಕೆ ಹೆಚ್ ಎಸ್ ಡಿ ಆರ್ ಪಿ ಹಾಗೂ ಜಿಲ್ಲಾ ಪಂಚಾಯತ್ ಯೋಜನೆಯ ಅಡಿಯಲ್ಲಿ ಕಟ್ಟಡಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

ಇ) 2007–08 ನೇ ಸಾಲಿನಲ್ಲಿ ಆರ್ ಐ ಡಿ ಎಫ್–12ರ ಯೋಜನೆ ಅಡಿಯಲ್ಲಿ 12 ಪ್ರಾ.ಆ ಕೇಂದ್ರಗಳಿಗೆ ಅನುದಾನ ಬಿಡುಗಡೆಗೊಳಿಸಲಾಗುತ್ತಿದೆ ಕೆ ಹೆಚ್ ಎಸ್ ಡಿ ಆರ್ ಪಿ ಯೋಜನೆ ಅಡಿಯಲ್ಲಿ 2007–08ನೇ ಸಾಲಿನಲ್ಲಿ 38 ಪ್ರಾ.ಆ ಕೇಂದ್ರಗಳಿಗೆ ಅನುದಾನ ಬಿಡುಗಡೆಗೊಳಿಸಲಾಗುವುದು ಜಿಲ್ಲಾ ಪಂಚಾಯತ್ ಯೋಜನೆ ಅಡಿಯಲ್ಲಿ 1 ಪ್ರಾಥಮಿಕ ಆರೋಗ್ಯ ಘಟಕಕ್ಕೆ 2006–07ನೇ ಸಾಲಿನಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ತುಮಕೂರು ಜಿಲ್ಲೆಯಲ್ಲಿ 3 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡ ನಿರ್ಮಾಣ ಮಾಡಲು ಪ್ರಸಕ್ತ ಸಾಲಿನ ಜಿಲ್ಲಾ ಪಂಚಾಯತ್ ಅನುದಾನದಲ್ಲಿ ರೂ 1 21 ಕೋಟಿಗಳ ಅಂದಾಜು ವೆಚ್ಚಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ

ವಿಧಾನ ಸಭಾ ಪ್ರಶ್ನೆ ಸಂಖ್ಯೆ. 877 (ದಿನಾಂಕ:8/2/07)
ಕಟ್ಟಡಗಳು ಇಲ್ಲದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆಗಳು	ಕಟ್ಟಡವಿಲ್ಲದ ಪ್ರಾ.ಆ. ಕೇಂದ್ರಗಳ ಸಂಖ್ಯೆ
1	ಬೆಂಗಳೂರು ನಗರ	2
2	ಬೆಂಗಳೂರು ಗ್ರಾ	5
3	ತುಮಕೂರು	21
4	ಶಿವಮೊಗ್ಗ	6
5	ಕೋಲಾರ	5
6	ಚಿತ್ರದುರ್ಗ	3
7	ಬೆಳಗಾವಿ	6

8	ವಿಜಾಪುರ	3
9	ಗದಗ	3
10	ಹಾವೇರಿ	1
11	ರಾಯಚೂರು	1
12	ಚಾಮರಾಜನಗರ	1
13	ಚಿಕ್ಕಮಗಳೂರು	4
14	ದಕ್ಷಿಣ ಕನ್ನಡ	1
15	ಹಾಸನ	4
16	ಕೊಡಗು	1
17	ಮಂಡ್ಯ	11
18	ಮೈಸೂರು	15
19	ಉಡುಪಿ	2
20	ಗುಲ್ಬರ್ಗ	2
21	ಕೊಪ್ಪಳ	2
22	ಬೀದರ್	1
	ಒಟ್ಟು	**100**

644 (525) **ಶ್ರೀ ಸುರೇಶ್ ಎಸ್ ಮಾರಿಹಾಳ (ಕಿತ್ತೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?**

ಅ) ಕಿತ್ತೂರು ಪಟ್ಟಣಕ್ಕೆ ಬಾಲಕಿಯರ ವಿದ್ಯಾರ್ಥಿನಿಲಯ ಮಂಜೂರಾತಿ ಕೋರಿ ಪ್ರಸ್ತಾವನೆ ಏನಾದರೂ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಹೌದು